ಕೊಂಡೆ. ಅಷ್ಟರಲ್ಲಿ ಗಡಿಯಾರ 3 ಗಂಟೆ ತೋರಿಸುತ್ತಿತ್ತು.

ನಾವು ಟ್ಯಾಕ್ಸಿ ಮೂಲಕ 3 ಕಿ.ಮೀ. ದೂರದಲ್ಲಿರುವ ಡಾಲ್ಫಿನ್ ಬೀಚಿನತ್ತ ತೆರಳಿದೆವು. ಸದಾ ಡಿಸ್ಕವರಿ ಚಾನೆಲ್‌ನಲ್ಲಿ ಮಾತ್ರ ಡಾಲ್ಫಿನ್‌ಗಳನ್ನು ಕಂಡು ಆನಂದಿಸುತ್ತಿದ್ದ ನನಗೆ ಹರುಷ ಉಕ್ಕಿಬಂತು. ಹಿಂದೆ ಬರುವಾಗ ಮಾರ್ಗದಲ್ಲಿದ್ದ 'ಯೋಟವಾಟಾ' ಹೆಸರಿನ 'ಕಿಬೂತ್'ಗೆ ಭೇಟಿ ನೀಡಿದೆವು. ಇಸ್ರೇಲಿಗರ ಆಧುನಿಕ ಕೃಷಿ, ಹೈನುಗಾರಿಕೆಯಲ್ಲಿ 'ಕಿಬೂತ್'ಗಳ ಪಾತ್ರ ಅತೀ ಮುಖ್ಯ ಎಂದು ನಮ್ಮ ಡ್ರೈವರ್ ವಿವರಣೆ ನೀಡಿದ.

'ಕಿಬೂತಿಸಂ' ಅಂದರೆ ಒಂದು ಚಿಕ್ಕ ಗ್ರಾಮದಲ್ಲಿನ ಪ್ರತಿಯೊಂದು ಕುಟುಂಬದವರೂ ಸಮಾನರು, ಅವರ ಮೂಲಮಂತ್ರ ದುಡಿದು ತಿನ್ನುವುದು. ಇಲ್ಲಿ ಯಾರೂ ಮೇಲುಕೀಳೆಂಬ ಭಾವನೆ ಇರುವುದಿಲ್ಲ. ಪರಸ್ಪರ ಸಮಾನತೆ ಹಾಗೂ ಒಗ್ಗಟ್ಟು ಕಾಪಾಡಿಕೊಳ್ಳುವುದು, ಕಿಬೂತ್‌ನ ದ್ವಾರದ ಬಳಿ ಬಂದು ಅಲ್ಲಿರುವ ಫೋನಿನಲ್ಲಿ ನಮ್ಮ ಡ್ರೈವರ್ ಮಾತನಾಡಿದ ಬಳಿಕ ದ್ವಾರಗಳು ತನ್ನಿಂದತಾನೇ ತೆರೆದವು. ಯಾವುದೇ ಸೆಕ್ಯುರಿಟಿ ಗಾರ್ಡ್ ಅಲ್ಲಿರಲಿಲ್ಲ. ಒಳಗೆ ಪ್ರವೇಶಿಸುತ್ತಿದ್ದಂತೆ, ನಾವು ಮರಭೂಮಿಯಲ್ಲಿದ್ದೇವೆಂಬ ಭಾವನೆಯನ್ನು ಮರೆತುಬಿಟ್ಟೆವು. ಸುತ್ತಮುತ್ತಲಿನ ಹಸುರಾದ ಖರ್ಜೂರದ ಹಾಗೂ ಇತರ ವೃಕ್ಷಗಳು ನಮ್ಮೆಲ್ಲರ ಗಮನ ಸೆಳೆದವು.

ಇಲ್ಲಿನ ಹೈನುಗಾರಿಕೆ ಗಮನಿಸಿದಾಗ, ಒಂದೊಂದು ಹಸುಗಳೂ ಕೂಡ ಹಾಲಿನ ಕಾರ್ಖಾನೆಗಳೋ ಎಂಬ ಭಾವನೆ ಬಂತು. ಕಾರಣ ಇಲ್ಲಿನ ಹಸುಗಳು ವರ್ಷಕ್ಕೆ ಸರಾಸರಿ 10,500 ಲೀಟರಿಗಿಂತಲೂ ಹೆಚ್ಚಿನ ಹಾಲು ನೀಡುತ್ತವೆ! ಆದರೆ ಗಂಡು ಕರುಗಳನ್ನು ಮಾಂಸಕ್ಕಾಗಿ ಪ್ರತ್ಯೇಕವಾಗಿ ಸಾಕುತ್ತಾರೆ. ಇವರ ಪಶುಪಾಲನೆ, ಕೈಗಾರಿಕೆ ಹಾಗೂ ಇತರ ಚಟುವಟಿಕೆಗಳನ್ನು ಗಮನಿಸಿ, ನಮ್ಮ ದೇಶದಲ್ಲೂ ಕಿಬೂತ್‌ಗಳು ಯಶಸ್ವಿಯಾದರೆ.. ಅನ್ನಿಸಿತು. ಇಲ್ಲಿನ ಕಿಬೂತ್‌ಗಳು ಪ್ರತಿ ಆಧುನಿಕ ಸೌಲಭ್ಯಗಳ ಜೊತೆಗೆ ಶಾಲೆ ಕಾಲೇಜ್‌ಗಳನ್ನೂ ಹೊಂದಿದ್ದು, ಸ್ವಯಂಸಂಪೂರ್ಣ ಹಳ್ಳಿಗಳಂತಿವೆ.


ಅಲ್ಲಿಂದ ಮರಳುವಾಗ ಹೆದ್ದಾರಿಯ ಪಕ್ಕದಲ್ಲಿರುವ 'ಖೈಬರ್' ರಕ್ಷಿತಾರಣ್ಯದ ಉಷ್ಟ್ರಪಕ್ಷಿ, ಹೆಸರಗತ್ತೆ, ಜಿಂಕೆ ಮುಂತಾದ ಪ್ರಾಣಿಗಳನ್ನೂ ಗಮನಿಸಿದೆವು. ಮಾರ್ಗದುದ್ದಕ್ಕೂ ಜೋರ್ಡಾನ್ ದೇಶ ನಮ್ಮಿಂದ 5-6 ಕಿ.ಮೀ. ನಷ್ಟು ಮಾತ್ರ ದೂರದಲ್ಲಿತ್ತು. ಆದರೆ ಸಮಯಾಭಾವದ ಕಾರಣ ಅಲ್ಲಿ ತೆರಳುವುದು ಸಾಧ್ಯವಾಗಲಿಲ್ಲ.

ಕೊನೆಯ ದಿನ ನಾವು ನೋಡ ಹೋಗಿದ್ದು 'ಕಿಂಗ್ಸ್ ಸಿಟಿ' ಎಂಬ ವಿಶ್ವವಿಖ್ಯಾತ ಬಹುಮಹಡಿಯುಳ್ಳ ಕಟ್ಟಡ. ಇದರ ಪ್ರವೇಶ ದರವಾದ 120 ಷಕೆಲ್ ನೀಡುವಾಗ ನನಗೇಕೊ ಅತೀ ಬೇಸರವೆನಿಸಿತು. ಇಲ್ಲಿ ನಮಗೆ ಯಾವುದೇ ರಿಯಾಯ್ತಿ ಇರಲಿಲ್ಲ. ಮೊದಲು ನಾವು ಗಮನಿಸಿದ್ದು ವಿಜ್ಞಾನಕ್ಕೆ ಸಂಬಂಧಿಸಿದ ಹಲವಾರು ಕೌತುಕಗಳುಳ್ಳ ಆಟಿಕೆಯನ್ನು ಹೊಂದಿರುವ ಪ್ರದೇಶ. ಬಳಿಕ ಈಜಿಪ್ಟ್‌ನ ಪುರಾತನ ವಿಷಯದ ಕುರಿತಾದ ಸಾಕ್ಷ್ಯಚಿತ್ರವಿತ್ತು. ಇದು 4ಡಿ ಚಿತ್ರವಾಗಿತ್ತು. ಶುರುವಿನಲ್ಲಿ ವೇಗವಾಗಿ ಕಿರುಚುತ್ತಾ ನಮ್ಮ ಬಳಿ ಒಂದು ಭಾರಿ ಹಕ್ಕಿಯೊಂದು ಧಾವಿಸಿದಾಗ, ಅದರ ರೆಕ್ಕೆಯಿಂದ ಉಂಟಾದ ಗಾಳಿಯು ನಮ್ಮನ್ನೆಲ್ಲ ಸೋಕಿ ನಿಜಕ್ಕೂ ಗಾಬರಿಯಾಯಿತು. ನಂತರ ನೀರಿನಲ್ಲಿ ನಡೆದ ಎರಡು ನೀರಾನೆಗಳ ಭೀಕರ ಕಾದಾಟದಿಂದ ನಮ್ಮ ಮೈಮೇಲೆ ನೀರಿನ ಹನಿ ಕೂಡ ಸಿಂಪರಣೆಯಾಗಿ, ನಮ್ಮನ್ನೆಲ್ಲಾ ಅದ್ಭುತ ಲೋಕಕ್ಕೆ ಈ 4-ಡಿ ಚಲನಚಿತ್ರವು ಕೊಂಡೊಯ್ಯಿತು. ಸೈನಿಕರ ಕಾದಾಟವಂತೂ ಅತ್ಯಂತ ರೋಚಕಮಯವಾಗಿ ಅವರ ಆಯುಧಗಳು ನಮ್ಮ ಮೇಲೆ ಬಿದ್ದಂತೆ ಭಾಸವಾಗುತ್ತಿತ್ತು.

ನಾನು ನೀಡಿದ 120 ಷಕೆಲ್ ನಿಜಕ್ಕೂ ಸಾರ್ಥಕವೆನಿಸಿತು. ಚಲನಚಿತ್ರದ ಬಳಿಕ 10 ಜನ ಕುಳಿತುಕೊಳ್ಳ ಬಹುದಾದ ನೀರಿನಲ್ಲಿನ ಹಳಿಗಳ ಮೇಲೆ ಸಾಗುವ ಗಾಡಿಯಲ್ಲಿ ಜಲಕ್ರೀಡೆ ಆಡಿದೆವು. ಸಂಜೆ 6 ಗಂಟೆಯಾಗಿದ್ದೇ ನಮಗೆ ತಿಳಿಯಲಿಲ್ಲ. ಸಮೀಪದಲ್ಲಿರುವ ಭಾರತೀಯ ಊಟ-ಉಪಹಾರ ದೊರಕುವ ಸುಪ್ರಸಿದ್ಧ 'ತಂದೂರಿ' ಹೊಟೇಲ್‌ನಲ್ಲಿ ಆಹಾರ ಸೇವನೆ. ಸುಮಾರು 20 ವರ್ಷಗಳ ಹಿಂದೆ ಕೇರಳದಿಂದ ಬಂದಿರುವ ಪುಷ್ಕರ್ಣಿ ಎಂಬ ಭಾರತೀಯ ಯಹೂದಿ ಮಹಿಳೆಯು ಪ್ರಾರಂಭಿಸಿದ ಈ ಹೊಟೇಲ್, ಇಸ್ರೇಲ್‌ನ ತುಂಬಾ ಖ್ಯಾತಿ ಹೊಂದಿದೆ.

ಇಸ್ರೇಲ್‌ನ ಪ್ರವಾಸ ಕೈಗೊಳ್ಳಬೇಕೆಂದಿದ್ದವರು ಯಾವುದೇ ಕಾರಣಕ್ಕೂ ಭಯ ಪಡುವ ಅಗತ್ಯವೇ ಇಲ್ಲ. ಎಲಾಟ್‌ನಂತಹ ಇನ್ನೂ ಹಲವಾರು ಪ್ರವಾಸೋದ್ಯಮ ತಾಣಗಳನ್ನು ಹೊಂದಿರುವ ಇಸ್ರೇಲ್‌ನಲ್ಲಿ, ಭಾರತೀಯರೆಂದರೆ ಎಲ್ಲಿಲ್ಲದ ಗೌರವ ಸತ್ಕಾರ ದೊರೆಯುತ್ತದೆ.





ತಿಮ್ನಾ ಪಾರ್ಕಿನಲ್ಲಿರುವ ಸೊಲೊಮನ್ ದೊರೆಯ ಗೋಪುರ